ದಿನಾಂಕಃ 04.01.2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎನ್ ಹೆಚ್ ವೈ ವಕೀಲರಿಂದಃ ಆರೋಪಿ ಪರವಾಗಿಃ

19. ಮದುವೆಯ ಮುಂಚಿನಿಂದಲೂ ಆರೋಪಿ ನಮಗೆ ಪರಿಚಯವಿದ್ದನು. ಮದುವೆಯ ಮೊದಲು ನೀವು ಬಾಣಾವಾರಕ್ಕೆ ಹೋಗಿ ಆರೋಪಿಯ ಬಗ್ಗೆ ವಿಚಾರಿಸಿದ್ದೀರಿ ಎಂದರೆ ಸರಿ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆಟೋ ತೆಗೆದುಕೊಳ್ಳಲು ರೂ.50,000/- ಹಣವನ್ನು ಕೊಡುವಂತೆ ಆರೋಪಿ ಕೇಳಿದ್ದ ಬಗ್ಗೆ ದೂರಿನಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಘಟನೆಯ ಹಿಂದೆ ಆರೋಪಿ ಮತ್ತು ನಿಮ್ಮ ಮಗಳ ನಡುವೆ ನಡೆದಿದೆ ಎನ್ನಲಾದ ಗಲಾಟೆಯ ಬಗ್ಗೆ ಪೊಲೀಸರಿಗೆ ದೂರನ್ನು ಕೊಟ್ಟಿದ್ದೀರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

20. ಆರೋಪಿ ಮತ್ತು ನಿಮ್ಮ ಮಗಳು ಅಜ್ಜಂಪುರದ ಅಂಬೇಡ್ಕರ್ ಬಡಾವಣೆಯಲ್ಲಿ ಬಾಡಿಗೆ ಮನೆಯನ್ನು ಮಾಡಿದ ನಂತರ ನೀವು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೀರಿ

ಎಂದರೆ ಸಾಕ್ಷಿ ನನ್ನ ಮಗಳ ಚಿಕ್ಕಮಗುವನ್ನು ನಾನೇ ನೋಡಿಕೊಳ್ಳುತ್ತಿದ್ದೆನು, ಹಾಗಾಗಿ ನಾನು ಆ ದಿನ ಮನೆಯನ್ನು ನೋಡಲು ಹೋಗಿರಲಿಲ್ಲ, ನಂತರ ಹೋಗಿದ್ದೆನು ಎನ್ನುತ್ತಾರೆ. ನನ್ನ ಮಗಳು ಗರ್ಭಿಣಿಯಾಗಿದ್ದ ಸಮಯದಲ್ಲಿ ಅಜ್ಜಂಪುರದ ಸರ್ಕಾರಿ ಆಸ್ಪತ್ರೆಗೆ ಮತ್ತು ತರೀಕೆರೆಯ ರಾಜ್ ನರ್ಸಿಂಗ್ ಹೋಮ್ ಗೆ ತೋರಿಸಿದ್ದೆವು. ಆ ಸಮಯದಲ್ಲಿ ನಿಮ್ಮ ಮಗಳಿಗೆ ಲೋ ಬೀಪಿಯಾಗಿದೆ ಎಂದು ಹೇಳಿ ಎರಡು ಬಾರಿ ಆಸ್ಪತ್ರೆಯಲ್ಲಿ ಡ್ರಿಪ್ಸ್ ಹಾಕಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ವೈಧ್ಯರು ಸಮಯಕ್ಕೆ ಸರಿಯಾಗಿ ಔಷದಿಯನ್ನು ತೆಗೆದುಕೊಳ್ಳಬೇಕು ಮತ್ತು ನೀರನ್ನು ಹೆಚ್ಚಾಗಿ ಕುಡಿಯಬೇಕು ಇಲ್ಲದಿದ್ದರೇ ಜೀವಕ್ಕೆ ಅಪಾಯ ಇದೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ.

21. ನಿಮ್ಮ ಮಗಳು ಎಂದಿಗೂ ಸಹ ಆರೋಪಿಯ ಬಗ್ಗೆ ನಿಮ್ಮ ಬಳಿ ದೂರನ್ನು ಹೇಳಿಕೊಂಡಿಲ್ಲ ಎಂದರೆ ಸಾಕ್ಷಿ ಹೇಳಿಕೊಂಡಿದ್ದಳು ಎನ್ನುತ್ತಾರೆ. ಆ ಬಗ್ಗೆ ನಿಮ್ಮ ಬಳಿ ಯಾವಾಗ ದೂರು ಹೇಳಿಕೊಂಡಿದ್ದಳು ಎಂದರೆ ಸಾಕ್ಷಿ ಮದುವೆಯಾದ 3 ತಿಂಗಳಿಗೆ ಹೇಳಿದ್ದಳು ಎನ್ನುತ್ತಾರೆ. ಆ ರೀತಿ ಮದುವೆಯಾಗಿ 3 ತಿಂಗಳಿಗೆ ಆರೋಪಿ ನಿಮ್ಮ ಮಗಳಿಗೆ ಕಿರುಕುಳ ಕೊಡುತ್ತಿದ್ದ ಬಗ್ಗೆ ಪೊಲೀಸರಿಗೆ ನೀಡಿದ್ದ ದೂರಿನಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ನಿರ್ದಿಷ್ಟವಾಗಿ 3 ತಿಂಗಳು ಎಂದು ಹೇಳಿಲ್ಲ ಆದರೆ ಆಗಾಗ್ಗೆ ಕೊಡುತ್ತಿದ್ದನು ಎಂದು ಹೇಳಿದ್ದೆನು ಎನ್ನುತ್ತಾರೆ.

22. ದಿನಾಂಕ 16.09.2019 ರಂದು ಅಜ್ಜಂಪುರ ಸರ್ಕಾರಿ ಆಸ್ಪತ್ರೆಗೆ ಹೋದಾಗ ಅಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿ ವೈದ್ಯರು ಮತ್ತು ನರ್ಸ್ ಇದ್ದರು ಎನ್ನುತ್ತಾರೆ. ಅಲ್ಲಿ ನೀವು ದಾಖಲಾತಿ ರಶೀದಿಯನ್ನು ಪಡೆದುಕೊಂಡರೇ ಎಂದರೆ ಸಾಕ್ಷಿ ರಾತ್ರಿ 3.00 ಗಂಟೆಯಾಗಿದ್ದರಿಂದ ಚೀಟಿ ಪಡೆದುಕೊಂಡಿಲ್ಲ ಎನ್ನುತ್ತಾರೆ. ಆ ದಿನ ರಾತ್ರಿ ನೀವು ನಿಮ್ಮ ಮಗಳ ಶವವನ್ನು ನೋಡಿದಾಗ ಅದು ಸಹಜವಾಗಿಯೇ ಇದ್ದುದ್ದರಿಂದ ನೀವು ಅದನ್ನು ತೆಗೆದುಕೊಂಡು ಹೋಗಿ ದಫನ್ ಮಾಡಿದ್ದೀರಿ ಎಂದರೆ ಸಾಕ್ಷಿ ಗಾಬರಿಯಲ್ಲಿ ಕೇವಲ ಮುಖವನ್ನು ನೋಡಿದ್ದೇವೆ, ಆಕೆಯ ಶರೀರವನ್ನು ಅಷ್ಟಾಗಿ ಗಮನಿಸಲು ಸಾಧ್ಯವಾಗಿರಲಿಲ್ಲ ಎನ್ನುತ್ತಾರೆ. ಆ ದಿನ ಆರೋಪಿ ಸಹ ನಮ್ಮೊಂದಿಗೆ ಆಸ್ಪತ್ರೆಗೆ ಬಂದಿದ್ದನು. ಮಾರನೇ ದಿನ ನಾವು ಮತ್ತು ಆರೋಪಿಯ ಕಡೆಯವರು ಎಲ್ಲರೂ ಸೇರಿ ನನ್ನ ಮಗಳನ್ನು ದಫನ್ ಮಾಡಿದೆವು.

23. ನನ್ನ ಮಗಳು ಮೃತಪಟ್ಟ ಬಳಿಕ ಆಕೆಯ ಮಗುವನ್ನು ನಾವೇ ನೋಡಿಕೊಂಡಿದ್ದೇವೆ. ತನ್ನ ಹೆಂಡತಿ ತೀರಿಕೊಂಡ ನೋವಿನಲ್ಲಿ ಆರೋಪಿ ತನ್ನ ತಂದೆ ತಾಯಿಯ ಮನೆಗೆ ಹೋಗಿದ್ದನು ಎಂದರೆ ಸಾಕ್ಷಿ ನಾವು ದೂರು ಕೊಡುತ್ತೇವೆ ಎಂದು ಹೆದರಿ ಆತ ಯಾವಾಗಲೋ ಮನೆ ಬಿಟ್ಟು ಹೋಗಿದ್ದಾನೆ ಎನ್ನುತ್ತಾರೆ. ನಿಮ್ಮ ಮಗಳು ತೀರಿಕೊಂಡಾಗ ನಿಮಗೆ ಆರೋಪಿಯ ಮೇಲೆ ಅನುಮಾನ ಬರಲಿಲ್ಲ ಎಂದರೆ ಸಾಕ್ಷಿ ಇಲ್ಲ

ಎಂದು ನುಡಿದು ನಾವು ಆ ಬಗ್ಗೆ ಯೋಚನೆ ಮಾಡಿರಲಿಲ್ಲ ಎನ್ನುತ್ತಾರೆ. ಆರೋಪಿ ಮತ್ತು ನಿಮ್ಮ ಮಗಳು ವಾಸವಿದ್ದ ಬಾಡಿಗೆ ಮನೆಯಲ್ಲಿನ ಸಾಮಾನುಗಳನ್ನು ನೀವೇ ತೆಗೆದುಕೊಂಡು ಹೋಗಿದ್ದೀರಿ ಎಂದರೆ ಸಾಕ್ಷಿ ಆರೋಪಿಯೇ ಅವುಗಳನ್ನು ತಂದು ನನ್ನ ತಾಯಿಯ ಮನೆಯಲ್ಲಿ ಇರಿಸಿದ್ದನು ಎನ್ನುತ್ತಾರೆ.

24. ಆರೋಪಿ ತನ್ನ ಮಗುವನ್ನು ನೋಡಲು ಬಂದಾಗ ನೀವು ಆತನಿಗೆ ನೋಡಲು ಬಿಡುತ್ತಿರಲಿಲ್ಲ ಎಂದರೆ ಸಾಕ್ಷಿ ಆರೋಪಿ ಎಂದಿಗೂ ಸಹ ತನ್ನ ಮಗುವನ್ನು ನೋಡಲು ಬಂದೇ ಇಲ್ಲ ಎನ್ನುತ್ತಾರೆ. 1 ತಿಂಗಳ ಬಳಿಕ ನೀವು ಆರೋಪಿಯ ಮೊಬೈಲ್ ಗೆ ಕರೆ ಮಾಡಿದ್ದಾಗಿ ಹೇಳಿದ್ದೀರಿ ಆ ರೀತಿ ಕರೆ ಮಾಡಿದ ದಿನಾಂಕ ಮತ್ತು ಸಮಯ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ನಿಖರವಾದ ದಿನ ಮತ್ತು ಸಮಯ ಗೊತ್ತಿಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ನನ್ನ ಮೊಬೈಲ್ ಫೋನಿನಿಂದ ಆರೋಪಿಯ ಮೊಬೈಲ್ ಫೋನಿಗೆ ಕರೆ ಮಾಡಿದ್ದೆನು. ನಿಮ್ಮ ಮೊಬೈಲ್ ನಂಬರ್ ಎಷ್ಟು ಎಂದರೆ ಸಾಕ್ಷಿ ನನಗೆ ಹೇಳಲು ಬರುವುದಿಲ್ಲ ಎನ್ನುತ್ತಾರೆ.

25. ಆ ರೀತಿ ನೀವು ಫೋನ್ ಮಾಡಿ ಆರೋಪಿಯ ಬಳಿ ಮನೆಯ ಅಡ್ವಾನ್ಸ್ ದುಡ್ಡನ್ನು ಕೇಳಿದ್ದ ಬಗ್ಗೆ ದೂರಿನಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿ ಫೋನ್ ಮಾಡಿ ಆತನನ್ನು ಮನೆಗೆ ಕರೆಯಿಸಿ ಆ ಬಗ್ಗೆ ಕೇಳಿದ್ದೇನೆ ಎನ್ನುತ್ತಾರೆ. ಆ ರೀತಿ ನೀವು ಆರೋಪಿಗೆ ಫೋನ್ ಮಾಡಿದಾಗ ಸಮಯ ಎಷ್ಟಾಗಿತ್ತು ಎಂದರೆ

ಸಾಕ್ಷಿ ಸುಮಾರು ಮಧ್ಯಾಹ್ನ 2.30 ಗಂಟೆಯಾಗಿತ್ತು ಎನ್ನುತ್ತಾರೆ. ಆಗ ಆರೋಪಿ ನಿಮಗೆ ಏನು ಹೇಳಿದನು ಎಂದರೆ ಸಾಕ್ಷಿ ನಾನು ಅಡ್ವಾನ್ಸ್ ಹಣವನ್ನು ವಾಪಾಸ್ಸು ಕೊಡುತ್ತೇನೆ ನನ್ನ ಮಗುವನ್ನು ಕೊಡುತ್ತೀರಾ ಎಂದು ಕೇಳಿದನು ಎನ್ನುತ್ತಾರೆ. ನಾನು ಫೋನ್ ಮಾಡಿದ ಮಾರನೇ ದಿನ ಆರೋಪಿ ನಮ್ಮ ಮನೆಗೆ ಬಂದಿದ್ದನು. ಆಗ ಸಮಯ ಸಂಜೆ 4.00 ಗಂಟೆಯಾಗಿತ್ತು. ಆಗ ಆರೋಪಿ ಎಲ್ಲಿಂದ ಬಂದಿದ್ದನು ಎಂದರೆ ಸಾಕ್ಷಿ ಆತನ ಊರು ಬಾಣಾವಾರ ಆದರೆ ಆತ ಎಲ್ಲಿಂದ ಬಂದಿದ್ದನು ಎಂದು ನನಗೆ ಗೊತ್ತಿಲ್ಲ. ಆ ದಿನ ಆರೋಪಿ ನಮ್ಮ ಮನೆಗೆ ಬಂದಾಗ ನಾನು, ನನ್ನ ಗಂಡ ಮತ್ತು ನನ್ನ ಮಗ ಮನೆಯಲ್ಲಿದ್ದೆವು, ನಂತರ ಫೋನ್ ಮಾಡಿ ನನ್ನ ತಮ್ಮ ಮತ್ತು ನನ್ನ ತಂದೆ ತಾಯಿಯನ್ನು ಕರೆಸಿಕೊಂಡೆನು.

26. ನಮ್ಮ ಮನೆಯ ಸುತ್ತಮುತ್ತ ಬೇರೆ ವಾಸದ ಮನೆಗಳು ಇವೆ. ಸದರಿ ಮನೆಗಳಲ್ಲಿ ವಾಸಿಸುವರು ಆ ಸಮಯಕ್ಕೆ ನಿಮ್ಮ ಮನೆಗೆ ಬಂದಿದ್ದರೇ ಎಂದರೆ ಸಾಕ್ಷಿ ಅಕ್ಕಪಕ್ಕದ ಮನೆಯವರು ಬಂದಿದ್ದರು ಎನ್ನುತ್ತಾರೆ. ಆಗ ಸುಮಾರು 1 ರಿಂದ 1 ವರೆ ಗಂಟೆ ನಮ್ಮ ಮತ್ತು ಆರೋಪಿಯ ನಡುವೆ ಮಾತುಕತೆ ನಡೆಯಿತು. ನೀವು ಹೇಳಿದಂತೆ ಆರೋಪಿ ನಿಮ್ಮ ಮನೆಗೆ ಬಂದಿರಲಿಲ್ಲ ಮತ್ತು ನಿಮ್ಮ ಮುಖ್ಯ ವಿಚಾರಣೆಯ ಕಂಡಿಕೆ 6 ಮತ್ತು 7 ರಲ್ಲಿ "ಆರೋಪಿ ನಿಮ್ಮ ಮಗಳಾದ ತಬಾರಕ್ ಬಾನುಳನ್ನು ರೂ.50,000/- ವರದಕ್ಷಿಣೆ ಹಣವನ್ನು ಕೊಡಲಿಲ್ಲವೆಂದು ಸಾಯಿಸಿದ್ದೇನೆ, ಈಗ ನೀವು ಏನು ಮಾಡಿಕೊಳ್ಳಲು

ಆಗುವುದಿಲ್ಲ, ಆಕೆಯ ದೇಹವನ್ನು ತೆಗೆಯಲು ಆಗುವುದಿಲ್ಲ, ಏನು ಕಿತ್ತು ಕೊಳ್ಳುತ್ತೀರ ಎಂದು ಹೇಳಿದನು. 7. ದಿನಾಂಕ 16.09.2019 ರ ರಾತ್ರಿ ಆರೋಪಿ ನನ್ನ ಮಗಳ ಕಪಾಳಕ್ಕೆ ಹೊಡೆದಿದ್ದಾಗಿ ಮತ್ತು ಆಗ ಆಕೆ ಜ್ಞಾನ ತಪ್ಪಿ ಬಿದ್ದಾಗ ಆರೋಪಿ ತನ್ನ ತಾಯಿಯಾದ ಜಬೀರಾ ಬಾನು ರವರಿಗೆ ಫೋನ್ ಮಾಡಿ ನನ್ನ ಮಗಳು ಜ್ಞಾನ ತಪ್ಪಿ ಬಿದ್ದಿರುವುದಾಗಿ ಆಕೆಗೆ ತಿಳಿಸಿದಾಗ ಆಕೆ ಸೀರೆ ಇದ್ದರೆ ಆಕೆಗೆ ನೇಣು ಹಾಕು ಎಂದು ಹೇಳಿದ್ದಾಗಿ ಆರೋಪಿ ನಮಗೆ ತಿಳಿಸಿದನು. ಆ ಸಮಯದಲ್ಲಿ ಆರೋಪಿಯ ತಮ್ಮನಾದ ಸಯ್ಯದ್ ಗೌಸ್ ನನ್ನ ಮಗಳು ಮತ್ತು ಅಳಿಯ ವಾಸವಿದ್ದ ಬಾಡಿಗೆ ಮನೆಯ ಮೇಲೆ ಮಲಗಿಕೊಂಡಿದ್ದಾಗಿ ಮತ್ತು ಆರೋಪಿ ಆತನನ್ನು ಕರೆದುಕೊಂಡು ಬಂದು ಅವರಿಬ್ಬರು ಸೇರಿ ನನ್ನ ಮಗಳಿಗೆ ಸೀರೆಯಿಂದ ನೇಣು ಹಾಕಿದ್ದಾಗಿ ಆರೋಪಿ ನಮಗೆ ತಿಳಿಸಿದನು" ಎಂದು ಈಗ ಓದಿ ಹೇಳಿದ ರೀತಿ ಯಾವುದೇ ವಿಷಯವನ್ನು ನಿಮಗೆ ತಿಳಿಸಿಲ್ಲ ಎಂದರೆ ಸರಿಯಲ್ಲ.

27. ನಿಮ್ಮ ಮಗಳು ಮೃತಪಟ್ಟ ಒಂದು ತಿಂಗಳ ಬಳಿಕ ನೀವು ನಿಮ್ಮ ಮಗಳು ಮತ್ತು ಅಳಿಯನಿಗೆ ಬಾಡಿಗೆ ಮನೆ ಮಾಡಿಕೊಡುವ ಸಮಯದಲ್ಲಿ ಮುಂಗಡವಾಗಿ ನೀಡಿದ್ದ ರೂ.15,000/- ಹಣವನ್ನು ವಾಪಾಸ್ಸು ಪಡೆದುಕೊಂಡು ನಿಮ್ಮ ಮೊಮ್ಮಗಳ ಹೆಸರಿನಲ್ಲಿ ಇಡುವ ಸಲುವಾಗಿ ಅದನ್ನು ಕೇಳಲು ಆರೋಪಿ ಮತ್ತು ನಿಮ್ಮ ಮಗಳು ವಾಸವಿದ್ದ ಮನೆಗೆ ಹೋಗಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆಗ ಆ ಮನೆಯ ಮಾಲೀಕರಾದ ಚಂದ್ರಶೇಖರ್ ರವರು ಸದರಿ ಮುಂಗಡ

ಹಣವನ್ನು ವಾಪಾಸ್ಸು ಪಡೆದುಕೊಂಡು ಹೋಗಿರುವುದಾಗಿ ತಿಳಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆಗ ನೀವು ಆರೋಪಿಗೆ ಫೋನ್ ಮಾಡಿ ಮಾತನಾಡಬೇಕು ಬಾ ಎಂದು ಕರೆದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆತ ಮಾರನೇ ದಿನ ಬೆಳಿಗ್ಗೆ ನಿಮ್ಮ ಮನೆಗೆ ಬಂದದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆಗ ಮನೆಯಲ್ಲಿ ನೀವು, ನಿಮ್ಮ ಗಂಡ, ನಿಮ್ಮ ಮಗ, ನಿಮ್ಮ ಮೊಮ್ಮಗಳು ಇದ್ದುದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಆರೋಪಿಯನ್ನು ಕುರಿತು ಮುಂಗಡ ಹಣವಾಗಿ ನೀಡಿದ್ದ ರೂ.15,000/- ಹಣವನ್ನು ಕೊಡುವಂತೆ ಕೇಳಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

28. ನನ್ನ ಮಗಳು ಮತ್ತು ಆರೋಪಿ ಬಾಡಿಗೆಗೆ ವಾಸವಿದ್ದ ಮನೆಯ ಮುಂಗಡ ಹಣವನ್ನು ವಾಪಾಸ್ಸು ಕೊಡುವಂತೆ ಕೇಳಲು ನಾನು ಹೋಗಿರಲಿಲ್ಲ ನನ್ನ ತಮ್ಮ ಹೋಗಿದ್ದನು. ಆ ರೀತಿ ನಿಮ್ಮ ತಮ್ಮ ಸದರಿ ಹಣವನ್ನು ಕೇಳಲು ಹೋಗಿದ್ದ ಬಗ್ಗೆ ದೂರಿನಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿ ನಾವು ಹೋಗಿದ್ದೆವು ಎಂದು ಹೇಳಿದ್ದೇನೆ, ನಿರ್ದಿಷ್ಟವಾಗಿ ನನ್ನ ತಮ್ಮ ಹೋಗಿದ್ದನು ಎಂದು ತಿಳಿಸಿಲ್ಲ ಎನ್ನುತ್ತಾರೆ. ನಿಮ್ಮ ತಮ್ಮ ಸದರಿ ಮನೆಯ ಮಾಲೀಕರ ಬಳಿ ಮುಂಗಡದ ಹಣವನ್ನು ಕೇಳಲು ಹೋಗಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಹೇಳಿದಂತೆ ಆ ದಿನ ಆರೋಪಿ ನಿಮ್ಮ ಮನೆಗೆ ಬಂದಿಲ್ಲ ಮತ್ತು ನೀವು ಹೇಳಿದಂತೆ ಯಾವ ವಿಚಾರವನ್ನು ನಿಮಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಅದೇ ನೀವು ಸಂಜೆ 6.00 ಗಂಟೆಗೆ ಪೊಲೀಸ್

ಠಾಣೆಗೆ ಹೋಗಿ ದೂರನ್ನು ಕೊಟ್ಟಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದೂರು ನೀಡಲು ನಾನು ಮತ್ತು ನನ್ನ ಗಂಡ ಪೊಲೀಸ್ ಠಾಣೆಗೆ ಹೋಗಿದ್ದೆವು ನಂತರ ನನ್ನ ತಮ್ಮ ಮತ್ತು ನನ್ನ ಮಾವ ಬಂದರು. ದೂರನ್ನು ನನ್ನ ತಮ್ಮ ಅಕ್ಬರ್ ಅಲಿ ಬರೆದುಕೊಟ್ಟಿದ್ದಾನೆ. ಅದೇ ದಿನ ನೀವು ನಿಮ್ಮ ಗಂಡ ಪೊಲೀಸ್ ಠಾಣೆಗೆ ಹೋಗಿದ್ದಾಗಿ ಮತ್ತು ನಿಮ್ಮ ತಮ್ಮ ಮತ್ತು ನಿಮ್ಮ ಮಾವ ಬಂದಿದ್ದಾಗಿ ಮತ್ತು ನಿಮ್ಮ ತಮ್ಮ ದೂರನ್ನು ಬರೆದುಕೊಟ್ಟಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

29. ದೂರು ನೀಡಿದ ಮಾರನೇ ದಿನ ಪೊಲೀಸ್ ಠಾಣೆಗೆ ಹೋಗಿದ್ದೆನು. ನೀವು ಮಾರನೇ ದಿನ ಪೊಲೀಸ್ ಠಾಣೆಗೆ ಹೋಗಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ನ್ಯಾಯಾಧೀಶರಿಗೆ ನೀಡಿದ್ದೀರಿ ಎಂದು ಹೇಳಲಾದ ಹೇಳಿಕೆಯಲ್ಲಿ ಆರೋಪಿಯ ವಿರುದ್ಧ ಸುಳ್ಳು ಆರೋಪ ಮಾಡಿದ್ದೀರಿ ಎಂದರೆ ಸರಿಯಲ್ಲ. ಅಜ್ಜಂಪುರದ ಅಂಬೇಡ್ಕರ್ ಬಡಾವಣೆಯಲ್ಲಿ ನಿಮ್ಮ ಮಗಳು ಮತ್ತು ಆರೋಪಿ ವಾಸವಿದ್ದ ಮನೆಯಲ್ಲಿ ನೀವು ಪೊಲೀಸರಿಗೆ ಸ್ಥಳವನ್ನು ತೋರಿಸಿದ್ದಾಗಿ ಮತ್ತು ಅವರು ಅಲ್ಲಿ ನಿಪಿ.3 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪೊಲೀಸರು ಸದರಿ ಪಂಚನಾಮೆಯನ್ನು ಮಾಡಿದಾಗ ಸಮಯ ಬೆಳಿಗ್ಗೆ 11.00 ಗಂಟೆಯಿಂದ 11.30 ಗಂಟೆಯಾಗಿತ್ತು. ನಿಪಿ.3 ರಲ್ಲಿ ಬರೆದಿರುವ ವಿಚಾರಗಳು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ

ನಮ್ಮನ್ನು ಕೇಳಿಯೇ ಬರೆದುಕೊಂಡರು ಎನ್ನುತ್ತಾರೆ.

30. ಅಲ್ಲಿ ಫೋಟೋವನ್ನು ಯಾರೋ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಫೋಟೋಗ್ರಾಫರ್ ಎಂದು ನುಡಿದು ನನಗೆ ಅಷ್ಟಾಗಿ ನೆನಪಿಲ್ಲ ಎನ್ನುತ್ತಾರೆ. ನೀವು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಪೊಲೀಸರಿಗೆ ಸ್ಥಳವನ್ನು ತೋರಿಸಿಲ್ಲ ಮತ್ತು ಅವರು ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಯಾವುದೇ ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನೀವು ನಿಪಿ.3 ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ಮಗಳೊಂದಿಗೆ ಅನ್ಯೂನ್ಯವಾಗಿ ಸಂಸಾರ ಮಾಡಿಕೊಂಡು ಇದ್ದು ನಿಮ್ಮ ಮಗಳು ಅನಾರೋಗ್ಯದಿಂದ ಮೃತಪಟ್ಟಿದ್ದರೂ ಸಹ ನಿಮ್ಮ ಮಗಳ ಮಗುವನ್ನು ಆರೋಪಿಗೆ ಕೊಡಬೇಕಾಗುತ್ತದೆ ಎಂದು ಆರೋಪಿಯ ವಿರುದ್ಧ ಸುಳ್ಳು ಆರೋಪ ಹೊರಿಸಿ, ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಆತನ ವಿರುದ್ಧ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ನೀವು ಆರೋಪಿಯ ಮೇಲೆ ಮಾಡಿರುವ ಎಲ್ಲಾ ಆರೋಪಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ನಿಮ್ಮ ಬಳಿ ರೂ.50,000/- ಹಣವನ್ನು ವರದಕ್ಷಿಣೆಯಾಗಿ ಎಂದಿಗೂ ಕೇಳಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ನಿಮ್ಮ

ಮಗಳ ಸಾವಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ